**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತೈದನೆಯ ಅಧಿವೇಶನ**

# ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–15)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ, 2011ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಬಳಿಕೆ ಅಧಿನಿಯಮ, 2011ನ್ನು (2014ರ ಕರ್ನಾಟಕ ಅಧಿನಿಯಮ ಸಂಖ್ಯೆ 38) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ.-**ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ, 2011 (2014ರ ಕರ್ನಾಟಕ ಅಧಿನಿಯಮ 38)(ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ)ರ 2ನೇ ಪ್ರಕರಣದ (ಡಿ) ಖಂಡದಲ್ಲಿ (i)ನೇ ಉಪಖಂಡದಲ್ಲಿನ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ರ 39, 104 ಅಥವಾ 67ನೇ ಪ್ರಕರಣಗಳಡಿ ಭೂಮಿಗಳ ಮೇಲೆ ಯಾರೇ ಸಕ್ಷಮ ಪ್ರಾಧಿಕಾರಿಗಳು ಯಾವುದೇ ಕ್ರಮವನ್ನು ಪ್ರಾರಂಭಿಸಿದರೆ, ಅದನ್ನು ಬಿಟ್ಟುಬಿಡತಕ್ಕದ್ದು.

ಅಲ್ಲದೆ ಪರಂತು, ಇಲ್ಲಿ ಅಂತರಗಳನ್ನು ವೈಮಾನಿಕವಾಗಿ (aerially) ಲೆಕ್ಕಹಾಕತಕ್ಕದ್ದು ಮತ್ತು ಯಾವುದೇ ಇತರ ವಿಧಾನವನ್ನು ಪರಿಗಣಿಸತಕ್ಕದ್ದಲ್ಲ."

**3. ಪ್ರಕರಣ 4ರ ತಿದ್ದುಪಡಿ.-** ಮೂಲ ಅಧಿನಿಯಮದ 4ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿರುವ "ಇಪ್ಪತ್ತೈದು ಸಾವಿರ ರೂಪಾಯಿಗಳವರಗೆ" ಎಂಬ ಪದಗಳಿಗೆ ಬದಲಾಗಿ "ಐವತ್ತು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**4. ಪ್ರಕರಣ 5ರ ತಿದ್ದುಪಡಿ.-** ಮೂಲ ಅಧಿನಿಯಮದ 5ನೇ ಪ್ರಕರಣದ (ಇ)ನೇ ಉಪಪ್ರಕರಣದಲ್ಲಿರುವ "ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ" ಎಂಬ ಪದಗಳಿಗೆ ಬದಲಾಗಿ "ಐವತ್ತು ಸಾವಿರ ರೂಪಾಯಿಗಳಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**5. ಪ್ರಕರಣ 9ರ ತಿದ್ದುಪಡಿ.-** ಮೂಲ ಅಧಿನಿಯಮದ 9ನೇ ಪ್ರಕರಣದಲ್ಲಿ,-

(i) ಉಪಪ್ರಕರಣ (2)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ವಿಶೇಷ ನ್ಯಾಯಾಲಯವು ಮೊಕದ್ದಮೆಯನ್ನು ಸಂಜ್ಞೇಯತೆಗೆ ತೆಗೆದುಕೊಳ್ಳುವ ಉದ್ದೇಶಕ್ಕಾಗಿ, ಭೂಮಿಯನ್ನು ಕಬಳಿಕೆ ಮಾಡಲಾಗಿರುವುದೆಂದು ಆರೋಪಿಸಲಾದ ಭೂಮಿಯ ಇರುವ ಜಾಗ ಅಥವಾ ಅದರ ವಿಸ್ತೀರ್ಣ ಅಥವಾ ಮಾಲೀಕತ್ವವನ್ನು ಅಥವಾ ಒಳಗೊಂಡಿರುವ ಕಾನೂನುಬಾಹಿರತೆಯ ಸ್ವರೂಪ ಅಥವಾ ನ್ಯಾಯೋದ್ದೇಶದ ದೃಷ್ಟಿಯನ್ನು ಅಥವಾ ಯಾವುದೇ ಇತರೆ ಸಂಬಂಧಿತ ವಿಷಯವನ್ನು ಪರಿಗಣಿಸತಕ್ಕದು. "

(ii) ಉಪಪ್ರಕರಣ (3)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(3) ಅಧಿನಿಯಮದಡಿ ಆರೋಪಿಸಲಾದ ಭೂ ಕಬಳಿಕೆಯ ಕೃತ್ಯ ಅಥವಾ ಹಕ್ಕುಸ್ವಾಮ್ಯ ಮತ್ತು ಮಾಲೀಕತ್ವದ ಪ್ರಶ್ನೆಯ ನಿರ್ಧರಣೆ ಅಥವಾ ಈ ಕಬಳಿಸಲಾದ ಯಾವುದೇ ಭೂಮಿಯ ಕಾನೂನುಬದ್ಧ ಸ್ವಾಧೀನತೆಯ ಹಾಗೂ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ರ ಅಧ್ಯಾಯ XIV-ಎ-ರಲ್ಲಿ ನಿರ್ದಿಷ್ಟಪಡಿಸಲಾದ ಅಪರಾಧಗಳ ಸಂಬಂಧದಲ್ಲಿ, ಕಬಳಿಸಲಾದ ಭೂಮಿ ಇರುವ ನಡೆದ ಪ್ರದೇಶಕ್ಕಾಗಿ ರಚಿಸಲಾದ ವಿಶೇಷ ನ್ಯಾಯಾಲಯದಲ್ಲಿ ಅಧಿವಿಚಾರಣೆಯನ್ನು ನಡೆಯಬಹುದು ಮತ್ತು ವಿಶೇಷ ನ್ಯಾಯಾಲಯದ ತೀರ್ಮಾನವು ಅಂತಿಮವಾಗಿರತಕ್ಕದ್ದು."

**6. ಪ್ರಕರಣ 12ರ ಪ್ರತಿಯೋಜನೆ.-** ಮೂಲ ಅಧಿನಿಯಮದ 12ನೇ ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**12. ವಿಶೇಷ ನ್ಯಾಯಾಲಯದ ಸಿಬ್ಬಂದಿ.-** (1) ಈ ಅಧಿನಿಯಮದಡಿಯಲ್ಲಿ ವಿಶೇಷ ನ್ಯಾಯಾಲಯವು ತನ್ನ ಪ್ರಕಾರ್ಯಗಳನ್ನು ನೆರವೇರಿಸಲು ನೆರವು ನೀಡುವುದಕ್ಕಾಗಿ ಅಗತ್ಯವಿರುವ ಅಧಿಕಾರಿಗಳನ್ನು ಮತ್ತು ಇತರ ಸಿಬ್ಬಂದಿಯನ್ನು ಸರ್ಕಾರವು ನೇಮಕ ಮಾಡತಕ್ಕದ್ದು.

(2) ಉಪಪ್ರಕರಣ (1)ರಡಿ ನೇಮಕವಾಗಬಹುದಾದ ಅಧಿಕಾರಿಗಳು ಮತ್ತು ನೌಕರರ ಪ್ರವರ್ಗಗಳು, ಅವರ ಸಂಬಳಗಳು, ಭತ್ಯೆಗಳು, ನೇಮಕಾತಿ ವಿಧಾನ ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು. (1)ನೇ ಉಪಪ್ರಕರಣದಡಿ ನೇಮಿಸಲಾದ ಅಧಿಕಾರಿಗಳು ಮತ್ತು ನೌಕರರ ಆಡಳಿತಾತ್ಮಕ ಅಧಿಕಾರಗಳನ್ನು ವಿಶೇಷ ನ್ಯಾಯಾಲಯದ ಅಧ್ಯಕ್ಷರು ನಿರ್ದಿಷ್ಟಪಡಿಸಬಹುದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
## (ವಿಧೇಯಕವನ್ನು ಮಂಡಿಸಿದಾಗ ಲಗತ್ತಿಸಿದಂತೆ)

ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ, 2014 (2014ರ ಕರ್ನಾಟಕ ಅಧಿನಿಯಮ 38)ನ್ನು ರಾಜ್ಯದಲ್ಲಿ 'ಭೂ ಕಬಳಿಕೆ'ಯಂತಹ ಯಾವುದೇ ಆಪಾದಿತ ಕೃತ್ಯಗಳ ಅಧಿವಿಚಾರಣೆಯನ್ನು ತ್ವರಿತಗೊಳಿಸಲು ಮತ್ತು ಭೂ ಕಬಳಿಕೆ, ಕಬಳಿಸಿದ ಭೂಮಿಯ ಒಡೆತನ, ಕಾನೂನುಬದ್ಧವಾಗಿ ಭೂಮಿಯ ಸ್ವಾಧೀನಕ್ಕೆ ಸಂಬಂಧಿಸಿದ ಹಾಗೂ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ರ ಅಧ್ಯಾಯ XIV(ಎ)ರಲ್ಲಿ ನಿರ್ದಿಷ್ಟಪಡಿಸಿದಂಥ ಅಪರಾಧಗಳಿಗೆ ಸಂಬಂಧಿಸಿದ ಪ್ರಕರಣಗಳ ಅಭಿಯೋಜನೆಗಾಗಿ ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಲು ಅಧಿನಿಯಮಿತಗೊಳಿಸಲಾಗಿದೆ.

ಸರ್ಕಾರಿ ಭೂಮಿ ಮತ್ತು ಸಾರ್ವಜನಿಕ ಉದ್ದೇಶಕ್ಕಾಗಿನ ಭೂಮಿಯ ರಕ್ಷಣೆಗಾಗಿನ ಉಪಬಂಧಗಳನ್ನು ಮುನ್ನಲೆಗೆ ತರಲು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ನ್ನು ತಿದ್ದುಪಡಿ ಮಾಡಲಾಗಿದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹಿಂಚ್ ಲಾಲ್ ತಿವಾರಿ ವಿರುದ್ಧ ಕಮಲಾ ದೇವಿ, ಜಗಪಾಲ್ ಸಿಂಗ್ ವಿರುದ್ಧ ಪಂಜಾಜ್ ರಾಜ್ಯ ಮತ್ತು ಇತರರು ಹಾಗೂ ಜೋಗಿಂದರ್ ವಿರುದ್ಧ ಹರ್ಯಾಣ ರಾಜ್ಯ ಮತ್ತು ಇತರರು, ಇವುಗಳಲ್ಲಿನ ವರದಿ ಯೋಗ್ಯ ತೀರ್ಪುಗಳಲ್ಲಿ ಸರ್ಕಾರದ ಮತ್ತು ಸಾರ್ವಜನಿಕ ಭೂಮಿಗಳ ಸಂರಕ್ಷಣೆಯಲ್ಲಿ ರಾಜ್ಯ ಸರ್ಕಾರದ ಜವಾಬ್ದಾರಿಯನ್ನು ಪದೇಪದೇ ಒತ್ತಿ ಹೇಳಿದೆ. ಈ ತಿದ್ದುಪಡಿಯು ಸರ್ಕಾರದ ಭೂಮಿಯನ್ನು ಸಂರಕ್ಷಿಸುವುದು ಮತ್ತು ಕಂದಾಯ ಅಧಿಕಾರಿಗಳು ಅವರ ಪ್ರಾಥಮಿಕ ಜವಾಬ್ದಾರಿಯಿಂದ ಹೊರಹೋಗದಂತಿರುವುದನ್ನು ಖಾತರಿಪಡಿಸುತ್ತದೆ. ಸರ್ಕಾರದ ಭೂಮಿಗಳ ಒತ್ತುವರಿಯ ವಿರುದ್ಧ ಪ್ರಕರಣಗಳ ದಾಖಲಿಸುವಾಗ ಅಂತರವನ್ನು  ಲೆಕ್ಕಹಾಕುವ ನಿಖರ ಮಾರ್ಗವನ್ನು ಪ್ರಾರಂಭಿಸುವುದು.

ಸಿಬ್ಬಂದಿ ಮತ್ತು ನೌಕರರ ನೇಮಕಾತಿಯು ಸರ್ಕಾರದ ಪರಮಾಧಿಕಾರವಾಗಿದ್ದು ಹಾಗೂ ನಿಯಮಗಳು, ಮಾನದಂಡಗಳು ಮತ್ತು ಆರ್ಥಿಕ ಆದೇಶಗಳ ಮೂಲಕ ಆಡಳಿತ ನಿರ್ವಹಿಸಲಾಗುವುದರಿಂದ, ಯಾವುದೇ ನೇಮಕಾತಿಗಾಗಿ ಸರ್ಕಾರದ ಮೇಲ್ವಿಚಾರಣೆಯನ್ನು ಅಗತ್ಯಪಡಿಸಲಾಗಿದೆ. ಭೂ ಕಬಳಿಕೆಯ ಇತರ ಪ್ರಕರಣಗಳಲ್ಲಿ ದಂಡನೆಯನ್ನು ಹೆಚ್ಚಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

# ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಪ್ರತ್ಯಾಯೋಜಿತ ಶಾಸನಾಧಿಕಾರದ ಕುರಿತು ಜ್ಞಾಪನ ಪತ್ರ

| | |
|---|---|
| **ಖಂಡ-6** | 12ನೇ ಪ್ರಕರಣದ ಮೂಲಕ ಪ್ರತಿಯೋಜಿಸಲು ಉದ್ದೇಶಿಸಲಾದ (2)ನೇ ಉಪ-ಪ್ರಕರಣವು, ವಿಶೇಷ ನ್ಯಾಯಾಲಯದ ಅಧಿಕಾರಿಗಳು ಮತ್ತು ಇತರ ನೌಕರರ ನೇಮಕ ಹಾಗೂ ಸಂಬಳಗಳು, ಭತ್ಯೆಗಳು, ನೇಮಕಾತಿ ವಿಧಾನ ಮತ್ತು ಇತರ ಸೇವಾ ಷರತ್ತುಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನೆಯ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿರುತ್ತದೆ.

**ಕೃಷ್ಣ ಭೈರೇಗೌಡ**
ಕಂದಾಯ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

# ಅನುಬಂಧ

## ಕರ್ನಾಟಕ ಭೂ ಕಬಳಿಕೆ ಅಧಿನಿಯಮ, 2011ರ (2014ರ ಕರ್ನಾಟಕ ಅಧಿನಿಯಮ ಸಂಖ್ಯೆ 38) ಉದ್ಧೃತ ಭಾಗ

**XX XX XX**

**2. ಪರಿಭಾಷೆಗಳು .-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

**XX XX XX**

(ಡಿ) ``ಭೂಮಿ'' ಎಂದರೆ,-

**XX XX XX**

"(i) ರಾಜ್ಯದ ಎಲ್ಲಾ ನಗರ ಪ್ರದೇಶಗಳಲ್ಲಿನ ಭೂಮಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪರಿಮಿತಿಯಿಂದ 18 ಕಿ.ಮೀ.ಗಳೊಳಗಿನ ಭೂಮಿ, ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ ಉಪಬಂಧಗಳ ಅಡಿಯಲ್ಲಿ ಅಧಿಸೂಚಿಸಿದ ನಗರ ಪರಿಮಿತಿಗಳಿಂದ 10 ಕಿ.ಮೀ.ಗಳೊಳಗಿನ ಭೂಮಿ, ನಗರಸಭೆಗಳ ಪರಿಮಿತಿಗಳಿಂದ 5 ಕಿ.ಮೀ.ಗಳೊಳಗಿನ ಭೂಮಿ, ಪುರಸಭೆ ಪರಿಮಿತಿಗಳು ಮತ್ತು ಪಟ್ಟಣ ಪಂಚಾಯಿತಿ ಪರಿಮಿತಿಗಳಿಂದ 3 ಕಿ.ಮೀ.ಗಳೊಳಗಿನ ಸರ್ಕಾರ, ವಕ್ಫ್ ಅಥವಾ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳು, ಸ್ಥಳೀಯ ಪ್ರಾಧಿಕಾರಗಳು, ಸರ್ಕಾರದ ಒಡೆತನ, ನಿಯಂತ್ರಣ ಹಾಗೂ ವ್ಯವಸ್ಥಾಪನೆಯಲ್ಲಿರುವ ಶಾಸನಬದ್ಧ ಅಥವಾ ಶಾಸನಬದ್ಧವಲ್ಲದ ಸಂಸ್ಥೆಗೆ ಸೇರಿರುವ ಭೂಮಿಯನ್ನು:

ಪರಂತು, ಮೇಲೆ ನಿರ್ದಿಷ್ಟಪಡಿಸಿದ ಭೂಮಿಯನ್ನು ಹೊರತುಪಡಿಸಿ ಇತರ ಪ್ರದೇಶಗಳಲ್ಲಿನ ಭೂ ಕಬಳಿಕೆಗೆ ಸಂಬಂಧಿಸಿದ ಬಾಕಿ ಪ್ರಕರಣಗಳು ತಕ್ಷಣದಿಂದ ಕೊನೆಗೊಳ್ಳತಕ್ಕದ್ದು."

**XX XX XX**

**4. ಭೂ ಕಬಳಿಕೆಯ ನಿಷೇಧ.- XX XX XX**

(3) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬನು, ಅಪರಾಧ ನಿರ್ಣಯವಾದ ತರುವಾಯ, ಒಂದು ವರ್ಷಕ್ಕೆ ಕಡಿಮೆಯಲ್ಲದ ಆದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಶಿಕ್ಷೆಯಿಂದ ಮತ್ತು ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**XX XX XX**

**5. ಭೂ ಕಬಳಿಕೆಗೆ ಸಂಬಂಧಪಟ್ಟಂತೆ ಇತರೆ ಅಪರಾಧಗಳಿಗಾಗಿ ದಂಡ.-** ಯಾವೊಬ್ಬ ವ್ಯಕ್ತಿಯು, ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಭೂಕಬಳಿಕೆ ಮಾಡುವ ದೃಷ್ಟಿಯಿಂದ ಅಥವಾ ಯಾವುದೇ ಅಂಥ ಭೂಕಬಳಿಕೆ ಸಂಬಂಧದಲ್ಲಿ,-

**XX XX XX**

(ಇ) ಯಾವೊಬ್ಬ ವ್ಯಕ್ತಿಯು, ಮೇಲೆ ನಮೂದಿಸಿದ ಯಾವುದೇ ಕೃತ್ಯ ಮಾಡುವಂತೆ ಮಾಡಿದರೆ ಅಥವಾ ಅದಕ್ಕಾಗಿ ಯಾವೊಬ್ಬ ವ್ಯಕ್ತಿಯನ್ನು ದೊರಕಿಸಿಕೊಂಡರೆ ಅಥವಾ ದೊರಕಿಸಿಕೊಳ್ಳಲು ಪ್ರಯತ್ನಿಸಿದರೆ,

- ಅವನು, ಅಪರಾಧ ನಿರ್ಣಯವಾದ ತರುವಾಯ, ಒಂದು ವರ್ಷಕ್ಕೆ ಕಡಿಮೆ ಇಲ್ಲದ ಆದರೆ, ಮೂರು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸ ಶಿಕ್ಷೆಯಿಂದ ಮತ್ತು ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**XX XX XX**

**9. ವಿಶೇಷ ನ್ಯಾಯಾಲಯಗಳ ಕಾರ್ಯವಿಧಾನ ಮತ್ತು ಅಧಿಕಾರಗಳು.-**

**XX XX XX**

(2) ವಿಶೇಷ ನ್ಯಾಯಾಲಯವು, ಮೊಕದ್ದಮೆಯನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವ ಉದ್ದೇಶಕ್ಕಾಗಿ, ಭೂ ಕಬಳಿಕೆ ಮಾಡಲಾಗಿದೆಯೆಂದು ಆರೋಪಿಸಲಾದ ಭೂಮಿ ಇರುವ ಜಾಗ ಅಥವಾ ಅದರ ವಿಸ್ತೀರ್ಣ ಅಥವಾ ಮೌಲ್ಯವನ್ನು ಅಥವಾ ಒಳಗೊಂಡಿರುವ ಕೆಡಕಿನ ಗಹನತೆ ಅಥವಾ ಅಗತ್ಯವಿರುವ ನ್ಯಾಯೋದ್ದೇಶದ ದೃಷ್ಟಿಯನ್ನು ಅಥವಾ ಸಂಬಂಧಟ್ಟ ಯಾವುವೇ ಇತರ ವಿಷಯಗಳನ್ನು ಪರಿಗಣಿಸತಕ್ಕದ್ದು.

(3) ಎಲ್ಲಾ ಆರೋಪಿತ ಭೂಕಬಳಿಕೆ ಕೃತ್ಯಗಳು, ಕಬಳಿಸಲಾದ ಭೂಮಿ ಎಲ್ಲಿದೆಯೋ ಆ ಪ್ರದೇಶಕ್ಕಾಗಿ ರಚಿಸಲಾದ ವಿಶೇಷ ನ್ಯಾಯಾಲಯ ಮಾತ್ರವೇ ಅಥವಾ ಅಂಥ ಪ್ರದೇಶಕ್ಕಾಗಿ ಒಂದಕ್ಕಿಂತ ಹೆಚ್ಚಿನ ವಿಶೇಷ ನ್ಯಾಯಾಲಯಗಳಿದ್ದರೆ, ಅವುಗಳ ಪೈಕಿ ಸರ್ಕಾರವು ಈ ಕುರಿತು ನಿರ್ದಿಷ್ಟಪಡಿಸಬಹುದಾದ ಅಂಥ ಒಂದರಲ್ಲಿ ವಿಚಾರಣೆಯನ್ನು ಮಾಡತಕ್ಕದ್ದು.

ಪರಂತು, ವಿಶೇಷ ನ್ಯಾಯಾಲಯವು ತನ್ನ ಮುಂದೆ ಸಲ್ಲಿಸಲಾದ ಯಾವುದೇ ಅರ್ಜಿಯು ಮೇಲ್ನೋಟಕ್ಕೆ ಕ್ಷುಲ್ಲಕ ಅಥವಾ ಕಿರುಕುಳಕಾರಿಯಾಗಿದೆಯೆಂದು ಅಭಿಪ್ರಾಯಪಟ್ಟರೆ ಅದು, ಆ ಅರ್ಜಿಯನ್ನು ಯಾವುದೇ, ಹೆಚ್ಚಿನ ವಿಚಾರಣೆಯನ್ನು ನಡೆಸದೆ ತಿರಸ್ಕರಿಸತಕ್ಕದ್ದು.

**XX XX XX**

**12. ವಿಶೇಷ ನ್ಯಾಯಾಲಯದ ಸಿಬ್ಬಂದಿ.-** (1) ಈ ಅಧಿನಿಯಮದಡಿಯಲ್ಲಿ ವಿಶೇಷ ನ್ಯಾಯಾಲಯವು ತನ್ನ ಪ್ರಕಾರ್ಯಗಳನ್ನು ನೆರವೇರಿಸಲು ಸಹಾಯಕ್ಕಾಗಿ ಬೇಕಾಗುವ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ವಿಶೇಷ ನ್ಯಾಯಾಲಯದ ಅಧ್ಯಕ್ಷರು ನೇಮಿಸಿಕೊಳ್ಳಬಹುದು.

(2) (1)ನೇ ಉಪಪ್ರಕರಣದಡಿ ನೇಮಿಸಬಹುದಾದ ಅಧಿಕಾರಿಗಳು ಮತ್ತು ನೌಕರರ ಪ್ರವರ್ಗಗಳು, ಅವರ ಸಂಬಳಗಳು, ಭತ್ಯೆಗಳು, ನೇಮಕಾತಿ ವಿಧಾನ ಮತ್ತು ಇತರ ಸೇವಾ ಷರತ್ತುಗಳು ಮತ್ತು ವಿಶೇಷ ನ್ಯಾಯಾಲಯದ ಅಧ್ಯಕ್ಷರ ಆಡಳಿತಾಧಿಕಾರಗಳು, ಅಧ್ಯಕ್ಷರೊಡನೆ ಸಮಾಲೋಚಿಸಿದ ತರುವಾಯ, ನಿಯಮಿಸಬಹುದಾದಂಥವು ಆಗಿರತಕ್ಕದ್ದು.

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 300, 18ನೇ ಮಾರ್ಚ್ 2025

**KARNATAKA LEGISLATIVE COUNCIL**
**ONE HUNDRED AND FIFTY FIFTH SESSION**

# THE KARNATAKA LAND GRABBING PROHIBITION (AMENDMENT) BILL, 2025

**(LA Bill No. 15 of 2025)**

**(As passed by the Karnataka Legislative Assembly)**

A Bill further to amend the Karnataka Land Grabbing Prohibition Act, 2011.

Whereas it is expedient further to amend the Karnataka Land Grabbing Prohibition Act, 2011 (Karnataka Act 38 of 2014), for the purposes hereinafter appearing;

Be it enacted by the Karnataka State Legislature in the seventy sixth year of the Republic of India as follows:-

**1. Short title and commencement.-** (1) This Act may be called the Karnataka Land Grabbing Prohibition (Amendment) Act, 2025.

(2) It shall come into force at once.

**2. Amendment of section 2.-** In the Karnataka Land Grabbing Prohibition Act, 2011 (Karnataka Act 38 of 2014),(hereinafter referred to as the Principal Act)in section 2, in clause (d), in sub-clause (i), after the proviso, the following shall be inserted, namely:-

"Provided further that, where any action has been initiated on lands under sections 39, 104 or 67 of the Karnataka Land Revenue Act, 1964 (Karnataka Act No. 12 of 1964) by any competent authority, the same shall be excluded.

Provided also that, the distances herein shall be reckoned aerially and in no other manner."

**3. Amendment of section 4.-** In the Principal Act, in section 4, in sub-section (3), for the words "twenty five thousand rupees", the words "fifty thousand rupees", shall be substituted.

**4. Amendment of section 5.-** In the Principal Act, in section 5, in clause (e), for the words "twenty five thousand rupees", the words "fifty thousand rupees", shall be substituted.

**5. Amendment of section 9.-** In the Principal Act, in section 9,-

(i) for sub-section (2), the following shall be substituted, namely:-

"(2) The Special Court shall for the purpose of taking cognizance of the case, consider the location or extent or ownership of the land alleged to have been grabbed or of the nature of the illegality involved or in the interest of justice or any other relevant matter".

(ii) for sub-section (3), the following shall be substituted, namely:-

"(3) In respect of an alleged act of land grabbing or the determination of questions of title and ownership to, or lawful possession of any land grabbed under this Act and offences specified in Chapter XIV-A of the Karnataka Land Revenue Act, 1964 (Karnataka Act No. 12 of 1964)may be tried in the Special Court constituted for the area in which the land grabbed is situated and the decision of the Special Court shall be final:"

**6. Substitution of section 12.-** In the Principal Act, for section 12, the following shall be substituted, namely:-

"**12. Staff of the special court.-**(1) The Government shall appoint officers and other employees required to assist the Special Court in the discharge of its functions under this Act.

(2) The categories of officers and employees who may be appointed under sub-section (1), their salaries, allowances, method of recruitment and other conditions of service shall be such as may be prescribed. The administrative powers of officers and employees appointed under sub-section (1) may be specified by the Chairman of the Special Court."

## STATEMENT OF OBJECTS AND REASONS

### (As appended to at the time of Introduction)

The Karnataka Land Grabbing Prohibition Act (Karnataka Act 38 of 2014) was enacted to establish a "Special Court" in the State for speedy trial of any act alleged as 'land grabbing' and to prosecute the offences related to land grabbing, ownership of the grabbing land, cases related possession of land legally and such offenses specified in Chapter XIV(A) of the Karnataka Land Revenue Act, 1964 (Karnataka Act 12 of 1964).

Whereas the Karnataka Land Revenue Act, 1964 (Karnataka Act 12 of 1964) has been amended to streamline the provisions for the protection of Government Land and land meant for public purposes. The Hon'ble Supreme Court in Hinch Lal Tiwari vs Kamala Devi, Jagpal Singh vs State of Punjab and others and Joginder vs State of Haryana and others in reportable judgements has repeatedly emphasized the responsibility of the State Government in protecting the Government and public lands. This amendment will enable to protect the Government land and ensure the revenue officials do not strike from their primary responsibility. To introduce the accurate way of measuring distance while filing case against encroachment of the Government lands.

And whereas appointment of staff and employees is a prerogative of the Government and governed by the rules, norms and economy orders. Hence, surervision of the Government is required for any recruitment. Enhancement of penalty in other cases of Land grabbing.

Hence, the Bill.

**FINANCIAL MEMORANDUM**

There is no extra expenditure involved in the proposed Legislative measure.

**MEMORANDUM REGARDING DELEGATED LEGISLATION**

| | |
|---|---|
| **Clause: 6** | sub-section (2), of section 12 proposed to be substituted empowers the State Government to prescribe rules the salaries, allowances, method of recruitment and other condition of service of officers and other employees of the special court. |

The proposed delegation of legislative power is normal in character.

**KRISHNA BYREGOWDA**
Minister for Revenue

**K.R. MAHALAKSHMI**
Secretary
Karnataka Legislative Council

**ANNEXURE**

**Extract from the Karnataka Land Grabbing Prohibition Act, 2011**

**(Karnataka Act 38 of 2014)**

**XXX XXX XXX**

**2. Definitions.-** In this Act, unless the context otherwise requires,-

**XXX XXX XXX**

(d) "Land"" includes,- 2 [(i) Land falling in all urban areas of the State and also land falling within 18 kms from the Bruhat Bengaluru MahanagaraPalike limits, land falling within 10 kms from the city limits notified under the provisions of the Karnataka Municipal Corporations Act, 1976, land falling within 5 kms from the City Municipal Council limits, land falling within 3 kms from the Town Municipal Council limits and Town Panchayat limits belonging to the Government, Wakf or the Hindu Religious Institutions and Charitable Endowments, a local authority, a statutory or nonstatutory body owned, controlled or managed by the Government: Provided that, excluding the land specified above in all other areas the cases pending related to land grabbing shall stand abated forthwith.

**4. Prohibition of land grabbing.-XXX XXX XXX**

(3) Whoever contravenes the provisions of sub-section (1) or sub-section (2) shall on conviction, be punished with imprisonment for a term which shall not be less than one year but which may extend to three years, and with fine which may extend to twenty five thousand rupees.

**XXX XXX XXX**

**5. Penalty for other offences in connection with land grabbing.**- Whoever, with a view to grabbing land in contravention of the provisions of this Act or in connection with any such land grabbing,-

**XXX XXX XXX**

(e) causes or procures or attempts to procure any person to do any of above mentioned acts;

shall, on conviction, be punished with imprisonment for a term which shall not be less than one year but which may extend to three years and with fine which may extend to twenty five thousand rupees.

**XXX XXX XXX**

**9. Procedure and powers of the Special Courts.-XXX XXX XXX**

(2) The Special Court shall for the purpose of taking cognizance of the case, consider the location, or extent or value of the land alleged to have been grabbed or of the substantial nature of the evil involved or in the interest of justice required or any other relevant matter.

(3) All alleged acts of land grabbing shall be tried only by the Special Court constituted for the area in which the land is situated, or where there are more Special Courts than one for such area, by such one of them as may be specified in this behalf by the Government.

Provided that if, in the opinion of the Special Court, any application filed before it, is prima facie frivolous or vexatious, it shall reject the same without any further enquiry.

**XXX XXX XXX**

**12. Staff of the Special Court.**- (1) The chairman of the Special Court may appoint officers and other employees required to assist the Special Court in the discharge of its functions under this Act.

(2) The categories of officers and employees who may be appointed under subsection (1), their salaries, allowances, method of recruitment and other conditions of service and the administrative powers of the Chairman of the Special Court shall be such as may be prescribed, after consultation with the Chairman.

**XXX XXX XXX**

Govt. Press, Vikasa Soudha, Bengalur, 18th Mar, 2025, P7, W.D. , Copies 300